

ನಾನು ಹೇಗೆ ಮಾಡಿಕೊಳ್ಳಬೇಕು ಎಂಬ ಅರಿವು–ಪ್ರಜ್ಞೆ ಇರುವ ಮಾದರಿಯಲ್ಲಿಯೇ, ಇಲ್ಲಿರುವ ಸುಳಿಗಳಿಗೆ ಬೀಳದೇ ನಾನು ಹೇಗೆ ಮುಂದುವರೆಯಬೇಕಾಗಿದೆ ಎಂಬ ಅರಿವೂ ಆತನಿಗೆ ಇರಬೇಕಲ್ಲವೇ?' ಎಂದು ಪ್ರಶ್ನಿಸುತ್ತಾರೆ.

ಚರ್ಚೆಯನ್ನು ಮುಂದುವರೆಸುವ ಅವರು, 'ನಮ್ಮ ವ್ಯವಸ್ಥೆಯಲ್ಲಿ ಉದ್ಯೋಗ ಪಡೆಯುವ ಪ್ರಕ್ರಿಯೆ ಯಾವ ಹಂತಕ್ಕೆ ಹೋಗಿದೆ' ಎಂಬುದೂ ಚರ್ಚೆಯ ಮುನ್ನೆಲೆಗೆ ಬರಬೇಕಿದೆ ಎನ್ನುತ್ತಾರೆ.

'ಚರ್ಚೆಗಳು ಅರ್ಥಪೂರ್ಣ ಆಯಾಮಗಳನ್ನು ಪಡೆದುಕೊಳ್ಳುವ ಬದಲು, ಆಕೆ ಬಾಬ್ ಮಾಡಿಕೊಂಡಿರುವ ಆಧುನಿಕ ಹುಡುಗಿ. ಅಷ್ಟೆಲ್ಲ ವಿಡಿಯೊಗಳನ್ನು ಮಾಡಿ ಕಳುಹಿಸುವ ಆಕೆ ಹೇಗೆ ಸಂತ್ರಸ್ತೆ ಆಗುತ್ತಾಳೆ' ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ ಎನ್ನುವ ಅಂಜಲಿ ಅವರ ಮಾತು ಚರ್ಚೆ ದಿಕ್ಕುತಪ್ಪಿರುವುದರತ್ತ ಗಮನಸೆಳೆಯುತ್ತಾರೆ.

'ನ್ಯಾಯಾಲಯದಲ್ಲಿ ಒಂದು ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬರುವ ತೀರ್ಪು ಮುಂದಿನ ದಿನಗಳಲ್ಲಿ ಅಂತಹುದೇ ಇತರ ಪ್ರಕರಣಗಳು ಎದುರಾದಲ್ಲಿ, ಅವುಗಳ ವಿಚಾರಣೆ ಸಂದರ್ಭದಲ್ಲಿ ನೆರವಿಗೆ ಬರುತ್ತದೆ. ಎಲ್ಲ ಪ್ರಕರಣಗಳಲ್ಲಿಯೂ ಕೋರ್ಟು ಸಮಾಜಕ್ಕೆ ಅನ್ವಯವಾಗುವಂತಹ ತೀರ್ಪು ಕೊಡುವುದು ಸಾಧ್ಯವಾಗುವುದಿಲ್ಲ. ಆದರೆ ಕೆಲವು ಪ್ರಕರಣಗಳಲ್ಲಿ ತೀರ್ಪು ನೀಡುವಾಗ, ಅಲ್ಲಿ ಸಮಾಜಕ್ಕೆ ಅನ್ವಯವಾಗುವ ಧ್ವನಿಯನ್ನು ಕೊಡಬೇಕಾಗುತ್ತದೆ' ಎನ್ನುವ ಅಂಜಲಿ ತಮ್ಮ ಮಾತುಗಳನ್ನು ವಿಸ್ತರಿಸುವುದು ಹೀಗೆ:

'ಅದು ಜ್ಯುಡಿಷಿಯಲ್ ಆಕ್ಟಿವಿಸಂ ವ್ಯಾಪ್ತಿಗೆ ಬರುತ್ತದೆ. ಅಂದರೆ ಇರುವ ಕಾನೂನುಗಳ ಪ್ರಕಾರ, ಪ್ರಸ್ತುತ ಇಂತಹ ಪ್ರಕರಣವನ್ನು ವೈಯಕ್ತಿಕ ನೆಲೆಯಲ್ಲಿ ನೋಡುವ ಅವಕಾಶವಷ್ಟೇ ನ್ಯಾಯಾಂಗಕ್ಕೆ ಇರುತ್ತದೆ. ವೈಯಕ್ತಿಕ ನೆಲೆಗಟ್ಟಿನಲ್ಲಿ ಪ್ರಕರಣ ನೋಡುವಾಗ, ಮಹಿಳೆಯೆಂದರೆ ವ್ಯಕ್ತಿಯಷ್ಟೇ ಆಗಿರುತ್ತಾಳೆಯೇ ಹೊರತು, ಮಹಿಳಾವರ್ಗ ಆಗಿರುವುದಿಲ್ಲ. ನ್ಯಾಯಾಂಗಕ್ಕೆ ಈ ಪ್ರಕರಣವನ್ನು ಮಹಿಳಾವರ್ಗಕ್ಕೆ ಅನ್ವಯಿಸಿ ನೋಡುವ ಅವಕಾಶ ಇರುವುದಿಲ್ಲ. ಆದ್ದರಿಂದ ನ್ಯಾಯಾಂಗವು ತಪ್ಪು ಸರಿಗಳ ವಿಮರ್ಶೆ ಮಾಡಿ ತೀರ್ಪು ನೀಡುತ್ತದೆ. ಅಥವಾ ವಿಚಾರಣೆಗೆ ಅರ್ಹವೆನಿಸದೇ ಇದ್ದರೆ ಪ್ರಕರಣವನ್ನು ಕೈಬಿಡುತ್ತದೆ'.

'ಆದರೆ ಸಮಾಜದ ಮೇಲೆ ಈ ಪ್ರಕರಣದ ಆಗುಹೋಗುಗಳು ಬೀರುವ ಪರಿಣಾಮಗಳೇ ಬೇರೆ. ಸಮಾಜವು ಈ ಪ್ರಕರಣವನ್ನು ಸಾಮಾನ್ಯೀಕರಿಸಿ (generalise) ನೋಡುತ್ತದೆ. ಅಂತಹ ಸಂದರ್ಭದಲ್ಲಿ ವ್ಯಕ್ತವಾಗುವ ಪ್ರತಿಕ್ರಿಯೆಗಳಲ್ಲಿ ಹೆಣ್ಣಿಗೇ ಅಧಿಕ ಜವಾಬ್ದಾರಿಯನ್ನು ಹೊರಿಸಲಾಗಿರುತ್ತದೆ. ಆದರೆ ವಾಸ್ತದಲ್ಲಿ 'ಶೀಲ', ನೈತಿಕತೆ ಮತ್ತು ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ದಾಟಿಸುವ ಹೊಣೆ ಗಂಡು ಹೆಣ್ಣಿಗೆ ಸಮಾನವೇ ಆಗಿರುತ್ತದೆ ಎಂಬುದನ್ನು ಪ್ರತಿಕ್ರಿಯೆಗಳ ಭರಾಟೆಯಲ್ಲಿ ನಾವು ಮರೆತಿರುತ್ತೇವೆ'. ಅಂಜಲಿ ರಾಮಣ್ಣ ಅವರ ಈ ವಿಶ್ಲೇಷಣೆ ನಮ್ಮ ಚರ್ಚೆಯ ತಕ್ಕಡಿಯಲ್ಲಿ ಏರುಪೇರಾಗಿರುವುದು ಎಲ್ಲಿ ಎನ್ನುವುದನ್ನು ಸೂಚಿಸುವಂತಿದೆ.

ಸಾಮಾನ್ಯವಾಗಿ ಎಷ್ಟೆಲ್ಲ ಹೋರಾಟಗಳ ಬಳಿಕ ಮಹಿಳಾಪರವಾದ ಒಂದು ಕಾನೂನು ರೂಪು ಪಡೆಯುತ್ತದೆ. ಕಾನೂನು ರೂಪುಗೊಂಡರಷ್ಟೇ ಸಾಲದು; ಕಾನೂನಿನ ಅರಿವನ್ನು ಜನರ ಬಳಿಗೆ ಕೊಂಡೊಯ್ಯುವ ಕೆಲಸವೂ ಅಷ್ಟೇ ಸಮರ್ಪಕವಾಗಿ ಆಗಬೇಕಾಗುತ್ತದೆ. ಉದಾಹರಣೆಗೆ, ಗ್ರಾಮೀಣ ಪ್ರದೇಶದಲ್ಲಿ ಕುಟುಂಬ ಯೋಜನೆಯ ನಿರ್ಧಾರವನ್ನು ತೆಗೆದುಕೊಳ್ಳುವ ಹಕ್ಕು ಇಂದಿಗೂ ಮಹಿಳೆಯರಿಗೆ ಇರುವುದಿಲ್ಲ. ಗಂಡು ಮಕ್ಕಳು ಬೇಕೆಂದೋ, ಮಕ್ಕಳಾಗದಂತೆ ತಡೆಯುವುದು ಪಾಪಕಾರ್ಯವೆಂದೋ ಹೇಳುವ ಮೂಲಕ ಆಕೆ ತನಗೆ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಳ್ಳದಿರುವಂತೆ ನೋಡಿಕೊಳ್ಳಲಾಗುತ್ತದೆ.

ಒಂದು ಕಾನೂನು ರೂಪುಗೊಂಡ ಬಳಿಕ ಅದರ ಮಾಹಿತಿಯು ಅರ್ಹರಿಗೆ ತಲುಪುವಂತೆ ಮಾಡುವುದೇ ಒಂದು ಸವಾಲು. ಆದರೆ, ಮಾಹಿತಿಯ ಸದ್ಬಳಕೆ ಮಾಡಿಕೊಳ್ಳುವ ಅವಕಾಶಗಳನ್ನು ಕಲ್ಪಿಸುವುದು ಮತ್ತೊಂದು ಸಮಸ್ಯೆ. ಇದೇ ವಿಚಾರವನ್ನು ವಿಸ್ತರಿಸುತ್ತ ಅಂಜಲಿ ರಾಮಣ್ಣ ಹೀಗೆ ಹೇಳುತಾರೆ: 'ಮಹಿಳೆಯ ಕಾನೂನುಗಳು ಅಥವಾ ಮಹಿಳೆಯು ದುರ್ಬಳಕೆಗೆ ಸುಲಭವಾಗಿ ಈಡಾಗುವಂತೆ ಪರಿಸ್ಥಿತಿಗಳನ್ನು ಸೃಷ್ಟಿಸುವುದೂ ಸಾಮಾಜಿಕ ವ್ಯವಸ್ಥೆಯಲ್ಲಿ ಮಿಳಿತವಾಗಿರುವ ಒಂದು ತೊಡಕು. ಅದನ್ನು ಕಿತ್ತು ಹಾಕಬೇಕಿದ್ದರೆ, ಕಾನೂನು ಅಥವಾ ಶಿಕ್ಷೆಯ ಪ್ರಮಾಣದಿಂದ ಸಾಧ್ಯವಿಲ್ಲ. ಇದು ಕೇವಲ ಪುರುಷರಿಗೆ ಸಂಬಂಧಿಸಿದ ವಿಷಯವೂ ಅಲ್ಲ. ಪುರುಷ ಮನೋಭಾವ ಇರುವ ಮಹಿಳೆಯರೂ ಇದನ್ನು ತಮಗರಿವಿಲ್ಲದಂತೆಯೇ ಬೆಂಬಲಿಸುತ್ತಿರುತ್ತಾರೆ. ಆದ್ದರಿಂದ ಅಂತಿಮವಾಗಿ ಕಾನೂನುಗಳ ಸ್ವರೂಪ ಎಂತಹುದೇ ಆಗಿರಲಿ, ಜನರ ಮನೋಭಾವ ಬದಲಾಗುವುದು ಅತೀ ಮುಖ್ಯವಾದ ಸಂಗತಿ'.

ಮನೋಭಾವಗಳು ಬದಲಾದಾಗ, 'ಮಿನಿಸ್ಟರ್ ಹತ್ರಾನೆ ಯಾಕೆ ಹೋಗಬೇಕಿತ್ತು' ಎಂಬಂತಹ ಪ್ರಶ್ನೆಗಳು ಮೂಡುವುದಿಲ್ಲ. ಜೊತೆಗೆ ಒಂದು ಉದ್ಯೋಗಕ್ಕಾಗಿ ಸಚಿವರ ಬಳಿಗೇ ಹೋಗಬೇಕಾದಷ್ಟು ವ್ಯವಸ್ಥೆಯು ಊನವಾಗಿದೆಯೇ ಎಂಬುದಾಗಿ ಪ್ರಶ್ನಿಸುವಷ್ಟರ ಮಟ್ಟಿಗೆ ಮನಸ್ಥಿತಿಗಳು ಸಬಲೀಕರಣಗೊಂಡಿರುತ್ತವೆ.

## ಕಾನೂನು ಜಾಗೃತಿ ಅಗತ್ಯ

ಕಾನೂನು ಅರಿವಿನ ಜಾಗೃತಿ ಅಥವಾ ದುರ್ಬಳಕೆಗೆ ಈಡಾಗದಂತೆ ಯೋಚಿಸುವ ಸಾಮರ್ಥ್ಯವನ್ನು ರೂಪಿಸುವ ಪ್ರಯತ್ನಗಳು ತಳಮಟ್ಟದಲ್ಲಿಯೇ ಹೆಚ್ಚಾಗಿ ನಡೆಯಬೇಕು. ಮಹಾನಗರಗಳಲ್ಲಿ, ಮೇಲ್ವರ್ಗಗಳಲ್ಲಿ ಅರಿವನ್ನು ಪಡೆದುಕೊಳ್ಳುವ ಮಾರ್ಗಗಳಿರುತ್ತವೆ. ಆದರೆ ಇಂದಿಗೂ ಹಿಂದುಳಿದ ಜಿಲ್ಲೆಗಳಲ್ಲಿ ಹೆಣ್ಣು ಮಗು ಹೆರುವುದೇ ಅಪರಾಧ ಎನ್ನುವ ಮನಸ್ಥಿತಿಯಿಂದ, ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ತಳ್ಳುವ ಘಟನೆಗಳು ವರದಿಯಾಗುತ್ತಿವೆ. ಮಹಿಳಾಪರ ಕಾನೂನುಗಳು ದುರ್ಬಳಕೆಯಾಗುತ್ತಿವೆ ಎಂದು ಅಪಸ್ವರ ಎತ್ತುವ ಟೀಕಾಕಾರರು, ಅಂತಹ ಕಾನೂನುಗಳ ಅರ್ಹರನ್ನು ತಲುಪದೇ ಆಗುವ ಜೀವಹಾನಿಗಳ ಬಗ್ಗೆ ಮಾತನಾಡುವುದೇ ಇಲ್ಲ.

ಕಾನೂನು ಜಾಗೃತಿಯೊಂದಿಗೆ ಶಿಕ್ಷಣ ಮತ್ತು ಆರ್ಥಿಕಸಬಲತೆ ಇದ್ದಾಗಲಷ್ಟೇ ಮಹಿಳೆ 'ದುರ್ಬಲ ವರ್ಗ' ಎಂಬ ಹಣೆಪಟ್ಟಿಯನ್ನು ಕಳಚಿಡಬಹುದೇನೋ? ಯಾಕೆಂದರೆ ವಾಸ್ತವದ ಅರಿವಿದ್ದರೂ, ಪೂರಕ ಸಂಪನ್ಮೂಲಗಳಿದ್ದಾಗಲೇ ಆಕೆಯ ಧ್ವನಿಗೆ ಹೆಚ್ಚು ಬಲ ಬರುವುದು.

ಪ್ರತಿಕ್ರಿಯಿಸಿ: feedback@sudha.co.in